# ಆಹಾ.. ಎಂಥಾ ಚಳಿ!

■ ರಾಜಶೇಖರ ಕುಕ್ಕುಂದಾ
ಕಲೆ: ಸಂತೋಷ್ ಸಸಿಹಿತ್ಲು



ಒಂದು ರಗ್ಗು ಹೊದ್ದುಕೊಂಡೆ
ಆಹಾ.. ಎಂಥಾ ಚಳಿ!
ಎರಡು ರಗ್ಗು ಹೊದ್ದುಕೊಂಡೆ
ಆಹಾ.. ಎಂಥಾ ಚಳಿ!
ಮೂರು ರಗ್ಗು ಹೊದ್ದುಕೊಂಡೆ
ಆಹಾ.. ಎಂಥಾ ಚಳಿ!
ನಾಲ್ಕು ರಗ್ಗು ಹೊದ್ದುಕೊಂಡೆ
ಆಹಾ.. ಎಂಥಾ ಚಳಿ!
ಐದು ರಗ್ಗು ಹೊದ್ದುಕೊಂಡೆ
ಆಹಾ.. ಎಂಥಾ ಚಳಿ!
ಆರು ರಗ್ಗು ಹೊದ್ದುಕೊಂಡೆ
ಆಹಾ.. ಎಂಥಾ ಚಳಿ!
ಏಳು ರಗ್ಗು ಹೊದ್ದುಕೊಂಡೆ
ಆಹಾ.. ಎಂಥಾ ಚಳಿ!
ಎಂಟು ರಗ್ಗು ಹೊದ್ದುಕೊಂಡೆ
ಆಹಾ.. ಎಂಥಾ ಚಳಿ!
ಒಂಬತ್ತು ರಗ್ಗು ಹೊದ್ದುಕೊಂಡೆ
ಆಹಾ.. ಎಂಥಾ ಚಳಿ!
ಹತ್ತು ರಗ್ಗು ಹೊದ್ದುಕೊಂಡೆ
ಆಹಾ.. ಎಂಥಾ ಚಳಿ!
ಎಲ್ಲ ತೆಗೆದು ಕುಳಿತೆ ನೋಡಿ
ಎಲ್ಲಿ ಹೋಯ್ತೋ ಓಡಿ! ■



# ಓದೊ ಹಾಡೊ ಕುಣಿ ಕುಣಿದಾಡೊ

■ ಸ. ರಘುನಾಥ
ಕಲೆ: ಸಂತೋಷ್ ಸಸಿಹಿತ್ಲು

ಟಿಂಗ್ ಟಿಂಗ್ ಟಿಂಗ್ ಟಿಂಗ್ ತಾಳ
ಹಾಡುವ ಕನ್ನಡ ಪದ್ಯ

ದಿಮಿಕಿಟ ದೀಂದೀಂ ನುಡಿಸೊ ಮೃದಂಗ
ಇಂಗ್ಲಿಷ್ ಹೃದಯಕೆ
ಕನ್ನಡ ಕಲಿಸುವ

ಟಟ್ಟ ಟಟಾ ಟಟ್ಟ ಬಡಿಯೊ ತಮಟೆ
ಮುದ್ದು ಮಕ್ಕಳ
ಮುತ್ತಿನ ಕನ್ನಡ

ಚಕಚಕ ಚಕಚಕ ಕನ್ನಡ ಓದೊ
ನಿನ್ನಯ ದನಿಯಲಿ
ಕೇಳಲಿ ಲೋಕ

ಜಗ್‌ಜಗ್ ನಕನಕ ಕುಣಿಯುತ ಹಾಡೊ
ನಮ್ಮೆಲ್ಲರ ತವರು
ಕನ್ನಡನಾಡು ■

## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in





**ನಿನಾದ್ ಕಾರಂತ್**
6ನೇ ತರಗತಿ, ಜೆ.ಜಿ.ಆರ್‌ವಿ.ಕೆ.
ರಾಮಮೂರ್ತಿ ನಗರ, ಬೆಂಗಳೂರು